

## ಮನಸೂರೆಗೊಳ್ಳುವ ಸಿಮೆಂಟ್ ಶಿಲ್ಪಗಳು

ಹಸಿರು ಬನದ ನಡುವೆ ಒಮ್ಮೆ ಸುತ್ತಾಡಿದರೆ ಸಾಕು, ಅಲ್ಲಿ ಗಾಂಧಿ ಜೀವನದ ದರ್ಶನವಾಗುತ್ತದೆ. ಅವರ ಜೀವನದ ಅಪರೂಪದ ಸನ್ನಿವೇಶಗಳ ಬದುಕು ಅನಾವರಣಗೊಳ್ಳುತ್ತದೆ. ರವೀಂದ್ರನಾಥ ಟ್ಯಾಗೋರರ ಜೊತೆ ಮಾತುಕತೆ, ದಂಡೀಯಾತ್ರೆ, ಚರಕದಲ್ಲಿ ನೂಲುತ್ತಿರುವುದು, ಮಗುವಿನೊಂದಿಗೆ ಆಟ, ಕಸ್ತೂರಬಾ ಅವರೊಂದಿಗೆ, ಧ್ಯಾನಮಗ್ನರಾಗಿ ಗಾಂಧಿ, ಆಭಾ ಮತ್ತು ಮನುಬೆನ್ ಜೊತೆಗೆ ಬರುತ್ತಿರುವುದು, ಹೀಗೆ ಗಾಂಧೀಜಿಯನ್ನು ನೆನಪಿಸುವ ಹಲವು ಸಿಮೆಂಟ್ ಶಿಲ್ಪಗಳು ಕಲಾವಿದರ ಕೈಯಲ್ಲಿ ರೂಪುಗೊಂಡಿವೆ. ಹೀಗೆ ಮೈದೆಳೆದಿರುವ ಶಿಲ್ಪಗಳು ಅವರ ಬದುಕನ್ನು ತೆರೆದಿಡುವುದು ಮಾತ್ರವಲ್ಲ, ಅವರ ಸಂದೇಶಗಳನ್ನೂ ನೆನಪಿಸುತ್ತಿವೆ. ಅಂದಹಾಗೆ ಈ ಸಿಮೆಂಟ್ ಶಿಲ್ಪಗಳಿರುವುದು ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿಯ ಗಾಂಧಿ ಭವನದ ಆವರಣದಲ್ಲಿ.

—ಸಿದ್ದೇಶ್ ಸಣ್ಣಗಿರಿ ಕೊಟ್ಟೂರು

## ಇಲ್ಲೊಂದು ಕಲ್ಲಿನ ರಥ

ಚಿತ್ರವನ್ನು ಕಂಡೊಡನೆ 'ಓಹ್... ಇದು ಹಂಪಿಯ ಕಲ್ಲಿನ ರಥ' ಅಂತೇನಾದರೂ ನೀವು ಉದ್ಗಾರ ತೆಗೆದರೆ ನಿಮ್ಮ ಊಹೆ ತಪ್ಪು. ಇದಿರುವುದು ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಹಿನ್ನೀರಿಗೆ ಹೊಂದಿಕೊಂಡಿರುವ ಹೊಸ ಕನ್ನಂಬಾಡಿ ಊರಿನ ವೇಣುಗೋಪಾಲಸ್ವಾಮಿ ದೇವಸ್ಥಾನದ ಆವರಣದಲ್ಲಿ. ಹೊಯ್ಸಳ ಸಂಪ್ರದಾಯದ ಪುರಾತನ ವೇಣುಗೋಪಾಲಸ್ವಾಮಿ ದೇಗುಲ ಕೃಷ್ಣರಾಜಸಾಗರದ ಹಿನ್ನೀರಿನಲ್ಲಿ ಮುಳಗಡೆಯಾಗಿತ್ತು. ಅಣೆಕಟ್ಟಿನ ನೀರಿನ ಮಟ್ಟ ಕಡಿಮೆಯಾಗುತ್ತಿದ್ದಾಗ ಮಾತ್ರ ಗೋಚರಿಸುತ್ತಿದ್ದ ಈ ದೇಗುಲವನ್ನು ಯಥಾವತ್ತಾಗಿ ಈಗಿನ ಸ್ಥಳಕ್ಕೆ ಸ್ಥಳಾಂತರಿಸಿ ಸುತ್ತಲೂ ಶಿಲಾಮಯ ದೇಗುಲದ ಸಂಕೀರ್ಣವನ್ನು ನಿರ್ಮಿಸಿದ ಶ್ರೇಯಸ್ಸು ಖೋಡೆ ಫೌಂಡೇಶನ್‌ಗೆ ಸಲ್ಲುತ್ತದೆ. ಕೆಆರ್‌ಎಸ್‌ನ ಹಿನ್ನೀರ ಮಧ್ಯೆ ವಿಶಾಲವಾದ ಸ್ಥಳದಲ್ಲಿ ತಲೆ ಎತ್ತಿದ ಸುಂದರ ಕೆತ್ತನೆಯ ಈ ದೇವಾಲಯ ನೋಡಲು ನಯನಮನೋಹರವಾಗಿದೆ. ದೇವಾಲಯದ ಆವರಣದಲ್ಲಿ ಹಂಪಿಯ ರಥದ ಪ್ರತಿರೂಪದಂತೆ ಈ ಕಲ್ಲಿನ ರಥವಿದೆ.

—ಧರ್ಮಾನಂದ ಶಿರ್ವ, ಬೆಂಗಳೂರು





## ಸೀಮೆ ಎಣ್ಣೆಯ ಲಾಂದ್ರ

ಹಿಂದಿನ ಕಾಲದಲ್ಲಿ ಎಲ್ಲರ ಮನೆಗಳಲ್ಲೂ ಸಾಮಾನ್ಯವಾಗಿ ಕಾಣಬರುತ್ತಿದ್ದ ಸೀಮೆಎಣ್ಣೆಯ ಲಾಂದ್ರ ಈಗ ವಿರಳವಾಗಿದೆ. ವಿದ್ಯುತ್ ಇಲ್ಲದ ಆ ದಿನಗಳಲ್ಲಿ ಸೀಮೆಎಣ್ಣೆಯಿಂದ ಉರಿಸಲಾಗುತ್ತಿದ್ದ ಈ ದೀಪ ಕತ್ತಲೆಯ ರಾತ್ರಿಗಳಲ್ಲಿ ಬೆಳಕಿನ ಮೂಲವಾಗಿತ್ತು. ಇಂದಿನ ಯುವ ಪೀಳಿಗೆಗೆ ಇಂಥಹದ್ದೊಂದು ದೀಪ ಇತ್ತೆಂದು ಬಹುಶಃ ಗೊತ್ತಿರಲಾರದು. ಆಧುನಿಕ ಉಪಕರಣಗಳ ಭರದಲ್ಲಿ ಅಟ್ಟದ ಮೂಲೆಯನ್ನು ಸೇರಿದ್ದ ಈ ಲಾಂದ್ರಕ್ಕೆ ಬಣ್ಣದ ಮೆರುಗು ನೀಡಿ ಮನೆಯ ಜಗುಲಿಯನ್ನು ಅಲಂಕರಿಸಿದ ಸಂಭ್ರಮ ನನ್ನದು. ಇದು ಇರುವುದು ಸಾಗರ ತಾಲ್ಲೂಕಿನ ಸುಳ್ಮನೆ ಮಂಜುನಾಥ ಅವರ ಮನೆಯಲ್ಲಿ.

—ಅರ್ಚನಾ ಸುಳ್ಮನೆ, ಬೆಂಗಳೂರು